ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:ಸಿ4(2)ಪ್ರೌ.ಶಾ.ಸ.ಶಿ.ಜೇ.ಪಟ್ಟಿ-01/2021-22 ದಿನಾಂಕ: 27.07.2022

-:ತಿದ್ದುಪಡಿ ಆದೇಶ:-

ವಿಷಯ : ದಿನಾಂಕ: 01.01.2021ರಲ್ಲಿ ಇದ್ದಂತೆ ಮೈಸೂರು ವಿಭಾಗದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಶಿಕ್ಷಕರು ಗ್ರೇಡ್-2 ಇವರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ತಪ್ಪು ನಮೂದುಗಳಾಗಿರುವ ಶಿಕ್ಷಕರಿಗೆ ಪರಿಷ್ಕರಿಸಿ ಉಪ ಜೇಷ್ಠತೆ ನಿಗಧಿಪಡಿಸಿರುವ ಬಗ್ಗೆ.

ಉಲ್ಲೇಖ : 1. ಈ ಕಚೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ:11.07.2022
2. ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ: ಎ1/ಜೇಷ್ಠತಾ ಪಟ್ಟಿ ಸಂ/42/2021-22 ದಿನಾಂಕ: 20.07.2022
3. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಕ.ಪ್ರೌ.ಶಿ.ಪ. ಮಂಡಳಿ, ಶಾ.ಶಿ. ಮತ್ತು ಸಾ.ಶಿ.ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರ ಪತ್ರ ಸಂಖ್ಯೆ: ಸನಿ1/ಅ1/ ಜೇಷ್ಠತಾ ಪಟ್ಟಿ-1/2021-22 ದಿನಾಂಕ; 22.07.2022

* * * * *

ಮೈಸೂರು ವಿಭಾಗದ, ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ದಿನಾಂಕ: 1-1-2021 ರಲ್ಲಿದ್ದಂತೆ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸಿ ಆಕ್ಷೇಪಣೆ ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಲಾಗಿತ್ತು, ಸದರಿ ಅವಧಿಯಲ್ಲಿ ವಿಭಾಗದ ಉಪ ನಿರ್ದೇಶಕರುಗಳು ಆಕ್ಷೇಪಣೆ ಆಧರಿಸಿದಂತೆ ದಿನಾಂಕ:1-1-2021ರ ಜೇಷ್ಠತಾ ಪಟ್ಟಿಗೆ ಸಲ್ಲಿಸಿರುವ ಆಕ್ಷೇಪಣೆ ಸರಿಪಡಿಸಿ ಎಕ್ಸೆಲ್‌ನಲ್ಲಿ ಸೇರ್ಪಡೆ ಮಾಡಿ ಜಿಲ್ಲಾ ಉಪ ನಿರ್ದೇಶಕರು ನೀಡಿದ ಮಾಹಿತಿ ಆಧರಿಸಿ ಸಹ ನಿರ್ದೇಶಕರು, ಮೈಸೂರು ವಿಭಾಗದವರು ಕ್ರೋಢೀಕರಿಸಿ ನೀಡಿರುವ ಮಾಹಿತಿ ಆಧರಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ: 11-07-2022 ರಂದು ಇಲಾಖಾ ವೆಬ್-ಸೈಟಿನಲ್ಲಿ ಪ್ರಕಟಿಸಲಾಗಿತ್ತು.

ಉಪ ನಿರ್ದೇಶಕರು (ಅಡಳಿತ) ಸಾ.ಶಿ.ಇ, ಮೈಸೂರು ಜಿಲ್ಲೆ ಇವರು ದಿನಾಂಕ: 20-07-2022 ರಂದು ಶ್ರೀಮತಿ ಮೀನಾಕುಮಾರಿ ವಿ ಸರ್ಕಾರಿ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು ತಾಲ್ಲೂಕು / ಜಿಲ್ಲೆ, ಈ ಶಾಲೆಗೆ ದಿನಾಂಕ: 15.06.2006 ರಲ್ಲಿ ಮೈಸೂರು ವಿಭಾಗಕ್ಕೆ ಕೋರಿಕೆ ಮೇಲೆ ವರ್ಗಾವಣೆಯಾಗಿ ಬಂದಿರುವುದಾಗಿ ವರದಿ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ದಿನಾಂಕ: 11-07-2022ರಂದು ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತಾ ಸಂಖ್ಯೆ 3400 ಇದ್ದು, ಸದರಿ ಶಿಕ್ಷಕರು ಬೆಂಗಳೂರು ವಿಭಾಗದಿಂದ ಮೈಸೂರು ವಿಭಾಗಕ್ಕೆ ದಿನಾಂಕ: 15-06-2006ರಂದು ಕೋರಿಕೆ ಮೇರೆಗೆ ವರ್ಗಾವಣೆಯಾಗಿ ಬಂದಿರುತ್ತಾರೆ. ಆದರೆ ಶಿಕ್ಷಕರು ವಿಭಾಗದಿಂದ ವಿಭಾಗಕ್ಕೆ ಬಂದ ದಿನಾಂಕವನ್ನು ಪರಿಗಣಿಸಲು ಈ ಕಛೇರಿಯಿಂದ ಅಧಿಸೂಚನೆ ಹೊರಡಿಸಲಾಗಿದೆ.

ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಕ.ಪ್ರೌ.ಶಿ.ಪ. ಮಂಡಳಿ, ಶಾ.ಶಿ. ಮತ್ತು ಸಾ.ಶಿ.ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರು ಶ್ರೀಮತಿ ಮೀನಾಕುಮಾರಿ ವಿ ಸರ್ಕಾರಿ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು ತಾಲ್ಲೂಕು / ಜಿಲ್ಲೆ, ಇವರ ಸೇವಾ ವಹಿಯಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಮೈಸೂರು ವಿಭಾಗಕ್ಕೆ ಕೋರಿಕೆ ವರ್ಗಾವಣೆಯಿಂದ ಬಂದ ದಿನಾಂಕದಿಂದ ಈ ಕೆಳಕಂಡಂತೆ ಜೇಷ್ಠತೆ ಕ್ರಮ ಸಂಖ್ಯೆಯನ್ನು ತಿದ್ದುಪಡಿಗಾಗಿ ಉಲ್ಲೇಖ(3)ರಲ್ಲಿ ವರದಿ ಸಲ್ಲಿಸಿರುತ್ತಾರೆ.

| ಕ್ರ ಸಂ | ಹೊಸ ಜೇಷ್ಠತಾ ಸಂಖ್ಯೆ 2021 | ಹಳೇ ಜೇಷ್ಠತಾ ಸಂಖ್ಯೆ 2019 | ಸರಿಪಡಿಸಿ ನಿಗಧಿಗೊಳಿಸಿದ ಜೇಷ್ಠತಾ ಸಂಖ್ಯೆ | ಶಿಕ್ಷಕರ ಹೆಸರು | ಸರಿಪಡಿಸಿದ ಕಾರಣಗಳು ದಾಖಲೆ ಸಹಿತ |
|---|---|---|---|---|---|
| 1 | 3400 | 3404 | 5504ಎ | ಶ್ರೀಮತಿ. ಮೀನಾಕುಮಾರಿ .ವಿ, ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು ತಾಲ್ಲೂಕು/ಜಿಲ್ಲೆ | ಶಿಕ್ಷಕರ ಸೇವಾ ವಹಿ |

ಉಲ್ಲೇಖ(3)ರ ವರದಿಯ ಆಧಾರದ ಮೇಲೆ ಸದರಿಯವರ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ 3400 ರ ಬದಲಿಗೆ 5504ಎ ಆಗುತ್ತದೆ, ಶ್ರೀ ಹನುಮಂತ ಸಹ ಶಿಕ್ಷಕರು, ಇವರ ಜೇಷ್ಠತಾ ಕ್ರಮ ಸಂಖ್ಯೆ 5504ರ ಕೆಳಗೆ ಮತ್ತು ಶ್ರೀಮತಿ. ಯಶೋದ ಕೆ.ಎನ್. ಸಹ ಶಿಕ್ಷಕರು ಇವರ ಜೇಷ್ಠತಾ ಕ್ರಮ ಸಂಖ್ಯೆ 5505ರ ಮೇಲೆ ಶ್ರೀಮತಿ. ಮೀನಾಕುಮಾರಿ .ವಿ, ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು ತಾಲ್ಲೂಕು/ಜಿಲ್ಲೆ ಇವರ ಜೇಷ್ಠತಾ ಕ್ರಮ ಸಂಖ್ಯೆ 5504ಎ ಎಂದು ಪರಿಗಣಿಸಿದೆ.

ಈ ಹಿನ್ನೆಲೆಯಲ್ಲಿ ಇವರ ಸೇವಾ ಪುಸ್ತಕಗಳನ್ನು ಪರಿಶೀಲಿಸಿ, ಉಪ ಜೇಷ್ಠತೆಯನ್ನು ನೀಡಲು ನಿರ್ಧರಿಸಿ, ಶಿಕ್ಷಕರ ಅರ್ಹತೆಗನುಗುಣವಾಗಿ ಉಪ ಜೇಷ್ಠತಾ ಸಂಖ್ಯೆಯನ್ನು ಈ ಮೇಲಿನಂತೆ ನಿಗಧಿಪಡಿಸಿ ಆದೇಶಿಸಿದೆ. ಈ ಆದೇಶವನ್ನು ಇಲಾಖೆಯ ಅಂತರ್ಜಾಲ www.schooleducation.kar.nic.in ರಲ್ಲಿ ಪ್ರಕಟಿಸಿದೆ. ಅದರಂತೆ ಓದಿಕೊಳ್ಳತಕ್ಕದ್ದು.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

(ಕೃಷ್ಣಾಜಿ ಎಸ್. ಕರಿಚಣ್ಣವರ್)
ನಿರ್ದೇಶಕರು(ಪ್ರೌಢ ಶಿಕ್ಷಣ)

ಇವರಿಗೆ:

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ
2) ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
3) ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಕ.ಪ್ರೌ.ಶಿ.ಪ. ಮಂಡಳಿ, ಶಾ.ಶಿ. ಮತ್ತು ಸಾ.ಶಿ.ಇಲಾಖೆ, ಮೈಸೂರು ವಿಭಾಗ, ಮೈಸೂರು ರವರಿಗೆ ಮುಂದಿನ ಕ್ರಮಕ್ಕಾಗಿ
4) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ತಾಲ್ಲೂಕು/ಜಿಲ್ಲೆ, ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ
5) ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ತಾಲ್ಲೂಕು/ಜಿಲ್ಲೆ ಇವರಿಗೆ ಮುಂದಿನ ಕ್ರಮಕ್ಕಾಗಿ
6) ಹಿರಿಯ ಸಹಾಯಕ ನಿರ್ದೇಶಕರು(ಇ-ಆಡಳಿತ), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಈ ತಿದ್ದುಪಡಿ ಆದೇಶವನ್ನು ಇಲಾಖೆಯ ಅಂತರ್ಜಾಲ www.schooleducation.kar.nic.in ರಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದೆ.

d:\2022-23\siniority adhisuchne-01.01.2021.docx